## ಅಂಬೇಡ್ಕರ್ ಶ್ರಮ ಅಪಾರ

ವಿಧಾನಸಭೆ: ಸಂವಿಧಾನ ರಚನೆಯ ಗೌರವ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ್ದಾರೆ.

ಸಂವಿಧಾನ ಕುರಿತು ಬುಧವಾರ ನಡೆದ ಚರ್ಚೆಯ ಸಂದರ್ಭದಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಮುಖ್ಯಮಂತ್ರಿಗಳು, ಸಂವಿಧಾನದ ರಚನೆಯ ಹಿಂದೆ ಅಂಬೇಡ್ಕರ್ ಅವರ ಅವಿರತ ಶ್ರಮವಿದೆ. ಸಂವಿಧಾನ ರಚನಾ ಸಮಿತಿಯ 7 ಮಂದಿ ಸದಸ್ಯರ ಪೈಕಿ ಹಲವರು ಸಭೆಗೆ ಗೈರು ಹಾಜರಾದ ಸಂದರ್ಭದಲ್ಲಿ ಅಂಬೇಡ್ಕರ್ ಒಬ್ಬರೇ ಆ ಕೆಲಸ ನಿರ್ವಹಿಸಿದರು. ಅವರು ರಚಿಸಿದ ಸಂವಿಧಾನ ತುಳಿತಕ್ಕೆ ಒಳಗಾದ ಜನರಿಗೆ ನೆರವಾಯಿತು. ಆದ್ದರಿಂದ ಸಂವಿಧಾನದ ರಚನೆಯಲ್ಲಿ ಅಂಬೇಡ್ಕರ್ ಶ್ರಮವನ್ನು ಯಾರೂ ಅಲ್ಲಗಳೆಯಲಾಗದು ಎಂದರು.

ಇದಕ್ಕೂ ಮೊದಲು ಮಾತನಾಡಿದ ಎಚ್.ಕೆ.ಪಾಟೀಲ್, ಸ್ಪೀಕರ್ ಅವರ ಭಾಷಣದಲ್ಲಿನ ಕೆಲವು ಅಂಶಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಅಂಬೇಡ್ಕರ್ ಸಂವಿಧಾನ ರಚಿಸಿದಾಗ ಅದಕ್ಕೆ ಯಾವುದೇ ಮೂಲ ಕರಡು ಇರಲಿಲ್ಲ. ಸಂವಿಧಾನದ ಸ್ಮರಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಪಾತ್ರವನ್ನು ಸ್ಮರಿಸಬೇಕಿತ್ತು ಎಂದರು. ತಾವು ಉದ್ದೇಶಪೂರ್ವಕವಾಗಿ ಆ ಅಂಶ ಕೈ ಬಿಟ್ಟಿಲ್ಲ. ಲಿಖಿತ ಭಾಷಣದಲ್ಲಿ ಜಾಗದ ಸಮಸ್ಯೆಯಿಂದ ಕೈ ಬಿಟ್ಟಿದ್ದೇನೆ. ತಪ್ಪಾದ ಅಂಶಗಳನ್ನು ಸರಿಪಡಿಸಿಕೊಳ್ಳಲು ಸಿದ್ಧನಿದ್ದೇನೆಂದು ಸ್ಪೀಕರ್ ವಿಶ್ವೇಶ್ವರಹೆಗಡೆ ಕಾಗೇರಿ ಹೇಳಿದರು.

## ನಾಳೆ ಮತ್ತೆ ಚರ್ಚೆ

ವಿಧಾನಸಭೆ: ಬಜೆಟ್ ಮರುದಿನವಾದ ಮಾರ್ಚ್ 6ರಂದು ಸಂವಿಧಾನ ಕುರಿತಾದ ಚರ್ಚೆ ಮುಂದುವರಿಯಲಿದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು. ಬುಧವಾರ ವಿಷಯದ ಮೇಲಿನ ಚರ್ಚೆ ನಡೆಯುತ್ತಿದ್ದಾಗ, ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಇನ್ನಿತರ ಕೆಲವು ಸದಸ್ಯರು, ಇನ್ನೊಂದು ದಿನ ವಿಷಯದ ಕುರಿತ ಚರ್ಚೆ ನಡೆಯುವುದು ಸೂಕ್ತ ಎಂಬ ಸಲಹೆ ಮಾಡಿದರು.

'ಸಂವಿಧಾನದ ಬಗ್ಗೆ ಮಾತನಾಡಲು ಹಲವಾರು ಸದಸ್ಯರು ಬಯಸಿದ್ದಾರೆ. ಕೇವಲ ಇದೊಂದು ದಿನದ ಚರ್ಚೆಗೆ ಸೀಮಿತಗೊಳಿಸಿದರೆ ಆಶಯ ಪೂರ್ಣಗೊಳ್ಳದು. ಆದ್ದರಿಂದ ನಾಳೆ ಬಜೆಟ್ ಮಂಡನೆಯ ಮರುದಿನ ಇದೇ ವಿಷಯವನ್ನು ಮುಂದುವರಿಸಬೇಕು' ಎಂಬುದಾಗಿ ಸಿದ್ದರಾಮಯ್ಯ ಸಲಹೆ ಮಾಡಿದರು. ಆಡಳಿತ ಪಕ್ಷ ಇದನ್ನು ವಿರೋಧಿಸಲಿಲ್ಲ. ಶುಕ್ರವಾರವೂ ಇದೇ ವಿಷಯವನ್ನು ಚರ್ಚಿಸಲು ತಮ್ಮ ಅಭ್ಯಂತರ ಇಲ್ಲ ಎಂದು ಮುಖ್ಯಮಂತ್ರಿಗಳು ಪೀಠಕ್ಕೆ ತಿಳಿಸಿದರು. ವಿಧಾನಸಭಾಧ್ಯಕ್ಷರು ಸಮ್ಮತಿಸಿದರು.

## ತಿರುಚುವ ಮಾತಿಲ್ಲ

ವಿಧಾನಸಭೆ: ಸಂವಿಧಾನ ತಿರುಚುವುದಾಗಿ ಕೆಲವರು ನೀಡುವ ಹೇಳಿಕೆ ಖಂಡನಾರ್ಹ ಎಂದು ಕಾಂಗ್ರೆಸ್ ಶಾಸಕಿ ರೂಪಾ ಶಶಿಧರ್ ಬುಧವಾರ ವಿಧಾನಸಭೆಯಲ್ಲಿ ಹೇಳಿದರು. ಈಚೆಗೆ ನಡೆಯುತ್ತಿರುವ ವಿದ್ಯಮಾನಗಳನ್ನು ಹಾಗೂ ಈ ವಿದ್ಯಮಾನಗಳಿಗೆ ಕಾರಣವಾದವರ ಹೆಸರನ್ನು ಪ್ರಸ್ತಾಪಿಸದೇ ಮಾತನಾಡಿದ ಶಾಸಕಿ, ಇಂತಹ ಪವಿತ್ರ ಗ್ರಂಥವನ್ನು ಗೌರವಿಸದೇ ತಿರುಚುವ ಮಾತನಾಡುವುದು ಸುತರಾಂ ಸರಿಯಲ್ಲ ಎಂದರು.

ಸಂವಿಧಾನ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ ಮಹಿಳೆಯರನ್ನು ಸ್ಮರಿಸಿದ ರೂಪಾ, ಮಹಿಳೆಯರಿಗೆ ರಕ್ಷಣೆ ಕೊಡಬೇಕು ಎಂಬ ಸಂವಿಧಾನದ ಆಶಯ ಇನ್ನೂ ಈಡೇರಿಲ್ಲ ಎಂದು ನೋವಿನಿಂದ ಹೇಳಿದರು. ಬಡವರು, ಶೋಷಿತರನ್ನು ಸಬಲರನ್ನಾಗಿ ಮಾಡುವುದು ಸಂವಿಧಾನದ ಮಹತ್ವದ ಆಶಯ. ಜಾತಿ ವರ್ಗ ಎಂಬ ಸಂಕುಚಿತ ಮನೋಭಾವ ಈಚಿನ ಹತ್ತು ವರ್ಷಗಳಲ್ಲಿ ಹೆಚ್ಚಿದೆ. ಆದ್ದರಿಂದ ಸಂವಿಧಾನದವನ್ನು ಕಾಪಾಡಿ, ಅದರ ಆಶಯಗಳನ್ನು ಜನಪ್ರತಿನಿಧಿ ಸಂಸ್ಥೆಗಳಾದ ವಿಧಾನಸಭೆ [illegible]

## ಕಾಸಿದ್ದರಷ್ಟೇ ಕೈಲಾಸ !

ವಿಧಾನಸಭೆ: ಕಾಸಿದ್ದವನಿಗೆ ಕೈಲಾಸ ಎನ್ನುವ ಮಾತು ಇನ್ನೂ ಅಪ್ರಸ್ತುತವಾಗಿಲ್ಲ. ದುಡ್ಡಿದ್ದರೆ ಏನು ಬೇಕಾದ್ರೂ ಮಾಡಬಹುದು. ಈ ಕಾಲಘಟ್ಟದಲ್ಲಂತೂ ಇದು ಹೆಚ್ಚು ಅನ್ವಯವಾಗುತ್ತಿದೆ ಎಂದು ಜೆಡಿಎಸ್‌ನ ಹಿರಿಯ ಶಾಸಕ ಎ.ಟಿ.ರಾಮಸ್ವಾಮಿ ಬುಧವಾರ ವಿಧಾನಸಭೆಯಲ್ಲಿ ನೋವಿನಿಂದ ಹೇಳಿದರು.

ಸಂವಿಧಾನದ ಮೇಲೆ ಮಾತನಾಡುತ್ತಿದ್ದ ಅವರು, ನೈತಿಕತೆ ಇರುವ ಅನೇಕರು ಚುನಾವಣೆಯಲ್ಲಿ ಗೆದ್ದು ಈ ಸದನಕ್ಕೇ ಬರಲು ಆಗುವುದಿಲ್ಲ ಎಂದು ನುಡಿದರು. ಮೊದಲು ಸಂಬಂಧಗಳಿಗೆ ಬೆಲೆಯಿತ್ತು. ಹೀಗಾಗಿ ಈಗ ಮನಿ (ಹಣ) ಈಸ್ ಥಿಕ್ಕರ್ ದ್ಯಾನ್ ಬ್ಲಡ್ (ರಕ್ತಕ್ಕಿಂತ ಗಟ್ಟಿ) ಆಗಿದೆ. ವರ್ಗಾವಣೆ ಎಂಬುದು ಭ್ರಷ್ಟಾಚಾರದ ಒಂದು ದಂಧೆಯಾಗಿದೆ ಎಂದರು.

ದೊಡ್ಡ ಅಧಿಕಾರಿಗಳು ಬೆಂಗಳೂರಿಗೆ ಬರಲು ಏಕೆಷ್ಟು ಒತ್ತಡ ಹಾಕುತ್ತಾರೆ? ಇಲ್ಲಿ ಒಳ್ಳೆಯ ಗಾಳಿ ಇದೆ ಎಂದೇ? ಸಂಚಾರ ಅತ್ಯಂತ ಕಡಿಮೆ ಇದೆ ಎನ್ನುವ ಕಾರಣಕ್ಕೋ ಎಂದು ರಾಮಸ್ವಾಮಿ ವ್ಯಂಗ್ಯವಾಗಿ ಕೇಳಿದರು. ಹಣ ಕೊಟ್ಟು ಬಂದ ಅಧಿಕಾರಿಗಳು ಹೇಗೆ ತಾನೇ ಒಳ್ಳೆಯ ಕೆಲಸ ಮಾಡಲು ಸಾಧ್ಯ ಎಂದು ಪ್ರಶ್ನಿಸಿದರು.

## ಹೊಸ ಇತಿಹಾಸ

ವಿಧಾನಸಭೆ: ದೇಶದ ವಿಧಾನಸಭೆಯೊಂದರಲ್ಲಿ ಇದೇ ಮೊದಲ ಬಾರಿಗೆ ಸಂವಿಧಾನದ ಕುರಿತಾದ ಚರ್ಚೆ ಆರಂಭವಾಗಿದ್ದು, ಬುಧವಾರ ರಾತ್ರಿಯವರೆಗೂ ಸದಸ್ಯರು ಸಂವಿಧಾನವನ್ನು ಬಣ್ಣಿಸಿ ಮಾತನಾಡಿದರು. ಕರ್ನಾಟಕ ವಿಧಾನಸಭೆಯ ಈ ಕ್ರಮ ಸಂಸದೀಯ ಇತಿಹಾಸದ ದಾಖಲೆ ಎಂದು ಬಣ್ಣಿಸಲಾಗುತ್ತಿದೆ.

ಸಂವಿಧಾನಕ್ಕೆ 70 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನಸಭೆ ವಿಷಯವಾಗಿ ಚರ್ಚೆ ಹಮ್ಮಿಕೊಂಡಿದೆ. ಬಜೆಟ್ ಅಧಿವೇಶನದಲ್ಲಿ ಈ ವಿಷಯವನ್ನು ಎಲ್ಲ ಸದಸ್ಯರು ಮುಕ್ತವಾಗಿ ಚರ್ಚಿಸಬೇಕು ಎಂಬುದಾಗಿ ನಿರ್ಣಯಿಸಲಾಗಿತ್ತು. ಜೊತೆಗೆ ಎಲ್ಲ ಸದಸ್ಯರಿಗೂ ಸಂವಿಧಾನದ ಪ್ರತಿಗಳನ್ನು ಸಾಕಷ್ಟು ಮುಂಚಿತವಾಗಿ ವಿತರಿಸಲಾಗಿತ್ತು. ಹೀಗಾಗಿ ಸದಸ್ಯರು ಓದಿಕೊಂಡು ಬರಲು ಸಾಕಷ್ಟು ಕಾಲಾವಕಾಶ ಸಿಕ್ಕಿತ್ತು. ಹೀಗಾಗಿ ವಿಷಯದ ಕುರಿತು ಮಾತನಾಡಿದ ಎಲ್ಲರೂ ಸಂವಿಧಾನದ ಒಂದೊಂದು ಅಂಶವನ್ನು ಎತ್ತಿಕೊಂಡು, ಆಶಯಗಳು ಎಷ್ಟರ ಮಟ್ಟಿಗೆ ಈಡೇರಿವೆ ಎಂಬ ವಿದ್ವತ್‌ಪೂರ್ಣ ಮಾತುಗಳನ್ನು ಆಡಿದರು.